ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಲೋಕಾಯುಕ್ತ ಪ್ರಕರಣಗಳ

ವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ

**Spl. C(Corruption) 4/2020**

ಫ್ರಾಸಾಃ **7** ಚಾಸಾಃ **9**

ದಿನಾಂಕಃ **09-06-2025**

ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು..

| | |
|---|---|
| ಹೆಸರು | ಃ- ಕೆ ಎಂ ಸತ್ಯನಾರಾಯಣ ಗೌಡ |
| ತಂದೆಯ ಹೆಸರು | ಃ- ಲೇಟ್ ಮುನಿಸ್ವಾಮಿ ಗೌಡ |
| ವಯಸ್ಸು | ಃ- 61 ವರ್ಷ |
| ಉದ್ಯೋಗ | ಃ- ನಿವೃತ್ತ ಮ್ಯಾನೇಜರ್ |
| ವಾಸ ಸ್ಥಳ | ಃ- ಕಾಮಧೇನಹಳ್ಳಿ ಕೋಲಾರ ತಾಲ್ಲೂಕು |

ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ

ದಿನಾಂಕಃ 28-11-2014 ರಿಂದ 26-02-2019 ರವರೆಗೆ ಮ್ಯಾನೇಜರ್ ಆಗಿ ಬಿಇಓ ಕೆಜಿಎಫ್ ನಲ್ಲಿ ಕರ್ತವ್ಯ ಸಲ್ಲಿಸಿದ್ದೇನೆ.

ಚಾಸಾ-1 ರವರು ತಮ್ಮ ಶಾಲೆ ಅಕ್ಷರಾ ಇಂಟರ್ ನ್ಯಾಷನಲ್ ಮಾನ್ಯತೆ ನವೀಕರಣಕ್ಕಾಗಿ ಒಂದು ಪ್ರಸ್ತಾವನೆ ಆರೋಪಿ ಕಛೇರಿಗೆ ಸಲ್ಲಿಸಿದ್ದರು. ಅದು ಚಾಸಾ-7 ರವರ ಬಳಿ ಇತ್ತು. ಆ ಸಂಬಂಧ ಶಾಲೆಯ ಮೂಲಭೂತ ಸೌಕರ್ಯಗಳನ್ನು ನೋಡಲು ಚಾಸಾ-8 ರವರಿಗೆ ಬಿಇಓ ಸೂಚಿಸಿದ್ದರು.

ದಿನಾಂಕಃ 06-10-2018 ರಂದು ನಿಪಿ-33 ಮತ್ತು 34 ರಂತೆ ಚಾಸಾ-8 ರವರು ಸಲ್ಲಿಸಿರುತ್ತಾರೆ. ಅದನ್ನು ಆರೋಪಿಯ ಕಛೇರಿಗೆ ಸಲ್ಲಿಸಿದ್ದಾರೆ.

ದಿನಾಂಕಃ 29-10-2018 ರಂದು ಕಡತವನ್ನು ಪರಿಶೀಲನೆಗಾಗಿ ಆರೋಪಿಯ ಕಛೇರಿಗೆ ನನ್ನ ಮುಖಾಂತರ ಕಳುಹಿಸಲಾಯಿತು.

ಖಂಡಿಕೆ-12 ರಲ್ಲಿ ಏನೂ ಬರೆಯದೇ ಕೇವಲ ಸಹಿ ಮಾಡಿದ್ದರು. ನಂತರ ಚಾಸಾ-7 ರವರು ದಿನಾಂಕಃ 02-11-2018 ರಂದು ಕರಡು ಜ್ಞಾಪನ ನಮೂನೆ-2 ರೊಂದಿಗೆ ಕಡತವನ್ನು ಪುನಃ ನನಗೆ ಸಲ್ಲಿಸಿದರು. ನಾನು ಪುನಃ ಅದೇ ದಿನ ಆರೋಪಿಗೆ ಕಳುಹಿಸಿಕೊಟ್ಟೆ. ನಿಪಿ-16 ರಲ್ಲಿ ನನ್ನ ಸಹಿ ಕಂಡು ಬರುತ್ತದೆ. ಅದನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 03-11-2018 ರಂದು ಎಸಿಬಿ ರವರು ನನ್ನನ್ನು ಆರೋಪಿಯ ಕಛೇರಿಗೆ ಕರೆಯಿಸಿ ಆರೋಪಿ ರೂ.10000/- ಲಂಚವನ್ನು ಚಾಸಾ-1 ರವರಿಂದ ಪಡೆದಿದ್ದಾಗಿ ಹೇಳಿದ್ದಾರೆ. ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಂಹೆಚ್ ವಕೀಲರು ಸಮಯಾವಕಾಶ ಕೋರಿದ್ದು ಒಪ್ಪಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

ಸಹಿ/-

**(ಮಂಜುನಾಥ ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.